1) ಫಲಾನುಭವಿಯು ಸಾಮಾನ್ಯವಾಗಿ ಇದೇ ಗ್ರಾಮದಲ್ಲಿ ವಾಸವಾಗಿರಬೇಕು.

2) ಫಲಾನುಭವಿಯ ವಾರ್ಷಿಕ ವರಮಾನ 11,800 ರೂ. ಗಿಂತಲೂ ಕಡಿಮೆ ಇರಬೇಕು.

3) ಫಲಾನುಭವಿಗೆ ಸಾಮಾನ್ಯವಾಗಿ ಮನೆ : ನಿವೇಶನ ಯಾವುದೂ ಇರಕೂಡದು.

ವಿಷಯ:- ಚಿತ್ರದುರ್ಗ ನಗರದಲ್ಲಿ ನಗರ ಸಾರಿಗೆ ವ್ಯವಸ್ಥೆ.

1117 (1827) **ಶ್ರೀ ಎಂ. ಚಂದ್ರಪ್ಪ (ಭರಮಸಾಗರ):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿತ್ರದುರ್ಗ ನಗರ ಒಂದು ಲಕ್ಷ ಜನಸಂಖ್ಯೆಗಿಂತ ಹೆಚ್ಚಿದ್ದು ನಗರ ಸಾರಿಗೆ ವ್ಯವಸ್ಥೆ ಇಲ್ಲದಿರುವುದು ನಿಜವೇ?

ಆ) ನಗರ ಸಾರಿಗೆ ವ್ಯವಸ್ಥೆ ಮಾಡುವುದಾದರೆ ಚಿತ್ರದುರ್ಗ ನಗರ ಸುತ್ತಮುತ್ತಲಿನ 10 ಕಿ.ಮೀ.ಗಳ ಒಳಗಡೆ ಬಸ್ಸು ಓಡಾಡಲು ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಹೌದು.

ಆ) ಒಂದು ನಗರ ಸಾರಿಗೆ ಮಾದರಿಯ ಎರಡು ಬಾಗಿಲುಳ್ಳ ಬಸ್ಸನ್ನು ಗ್ರಾಮೀಣ ದರದಲ್ಲಿ 28-7-1996ರಿಂದ ಪ್ರಾರಂಭಿಸಿ ಚಿತ್ರದುರ್ಗ ನಗರದ ಸುತ್ತಮುತ್ತಲಿನ 5 ಮಾರ್ಗಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.

ವಿಷಯ:- ರಾಜ್ಯದಲ್ಲಿಯ ಪ್ರಮುಖ ತೋಟಗಾರಿಕೆ ಬೆಳೆಗಳು.

1118 (1829) **ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ ಶಹರ):-** ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿಯ ಪ್ರಮುಖ ತೋಟಗಾರಿಕೆ ಬೆಳೆಗಳು ಯಾವುವು? (ಪ್ರತಿ ಜಿಲ್ಲೆಯ ಪ್ರತಿ ವರ್ಷದ ತೋಟಗಾರಿಕೆ ಉತ್ಪಾದನೆಯ ಪ್ರಮಾಣದ ಪೂರ್ಣ ವಿವರ ನೀಡುವುದು.)

ಆ) ಉಳ್ಳಾಗೆಡ್ಡೆ, ಮೆಣಸಿನಕಾಯಿ, ಆಲೂಗೆಡ್ಡೆ ಮತ್ತು ಬೆಳ್ಳುಳ್ಳಿ ಇವುಗಳ ಉತ್ಪಾದನೆಯ ಪ್ರಮಾಣ ಯಾವ ಯೋಜನೆಯಲ್ಲಿ ಪ್ರತಿ ವರ್ಷ ಎಷ್ಟು ಇರುವುದು?

ಇ) ಕರ್ನಾಟಕ ರಾಜ್ಯದಲ್ಲಿ ತೋಟಗಾರಿಕೆಯ ಉತ್ಪಾದನೆ ಸಂಸ್ಕರಣೆ ಮಾಡುವ ಉದ್ದಿಮೆಗಳು ಇವೆಯೇ? ಅವುಗಳ ಪೂರ್ಣ ಹೆಸರು, ವಿಳಾಸ ಮತ್ತು ಸಂಸ್ಕರಣೆ ಮಾಡುವ ಉತ್ಪಾದನೆಯ ವಿವರ ನೀಡುವುದು.

ಶ್ರೀ. ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):-

ಅ) ವಿವರವನ್ನು ಅನುಬಂಧ 1 ರಲ್ಲಿ ಲಗತ್ತಿಸಿದೆ.